ಕೇಳಿಸುವ ಶಬ್ದ ಮಾಡುತ್ತ ಕುಡಿಯತೊಡಗಿದ. ಅವ್ವ ತನ್ನ ಕಪ್‌ನ್ನು ನನ್ನ ಮುಂದೆ ಸರಿಸಿದಳು. ಅವಳ ಮೇಲೆ ನನಗೆ ಹೇಗೂ ಸಿಟ್ಟು ಬಂದಿತ್ತು. ಅವಳಿಗೆ ಸ್ವಲ್ಪವೂ ಬಿಡದಂತೆ ಕುಡಿದೆ. ಒಂದು ಹನಿಯನ್ನೂ ಉಳಿಸಿದಂತೆ ಕುಡಿದಿದ್ದನ್ನು ನೋಡಿ ಪಾಪ ಆಕೆ ಏನೂ ಅನ್ನಲಿಲ್ಲ. ಬದಲಾಗಿ ನಸುನಕ್ಕಳು.

ಅವಳು ಸಿಟ್ಟು ಮಾಡಿಕೊಳ್ಳದೆ ಯಾಕೆ ನಸುನಕ್ಕಳೆಂದು ನನಗೆ ಆವತ್ತೇ ಗೊತ್ತಾಯಿತು. ಅಂದು ರಾತ್ರಿ ನನ್ನ ಕೋಣೆಯಲ್ಲಿ ನಾನು ಬೇಗನೆ ಮಲಗದಿದ್ದಾಗ ಯಾವುದೋ ರಾಜಕುಮಾರಿಯ ಕತೆ ಹೇಳುತ್ತ ತಟ್ಟಿ ಮಲಗಿಸುತ್ತಿದ್ದಳು: "ಏ ಪುಟ್ಟಾ, ನಾ ಒಂದು ಮಾತು ಹೇಳ್ತೀನಿ, ನೀನು ಸಿಟ್ಟು–ಸೆಡವು ಮಾಡಿಕೋಬಾರದು. ಅಳಬಾರದು. ಹಟ ಮಾಡಬಾರದು. ಏನು?"

''ಏನಮ್ಮ?''

"ನೀನು ಪ್ರಾಮಿಸ್ ಮಾಡಿದರ ಮಾತ್ರ ನಾ ಹೇಳ್ತೇನಿ."

''.....''

"ನೋಡು ಲ್ಯಾರಿ, ನೀನು ಮುಂಜಾನೆದ್ದು ಇಷ್ಟು ದಿನ ನನ್ನ ಹಾಸಿಗೆಯೊಳಗ ಬಂದು ನಿದ್ದಿ ಮಾಡತೀಯಲ್ಲ, ಅದು ಇನ್ನ ಮ್ಯಾಲ ಆಗಬಾರದು. ಪಾಪ, ಡ್ಯಾಡಿ ದಣಿದು ಮಕ್ಕೊಂಡಿರತಾರ. ತಿಳಿತೇನು?"

ಓಹೋ! ಡ್ಯಾಡಿ ಬಹಳ ಚಾಣಾಕ್ಷನಿದ್ದಾನೆ. ಎಷ್ಟೆಲ್ಲ ಮುಂದಾಲೋಚನೆ ಮಾಡಿ ತನ್ನನ್ನು ಕಟ್ಟಿಹಾಕುತ್ತಿದ್ದಾನೆ! ಇವನ ಪೂರ್ವಾಪರವೆ ತಿಳಿಯುತ್ತಿಲ್ಲ. ಆದರೂ ಅವ್ವ ಪ್ರೀತಿಯಿಂದ ಕೇಳುತ್ತಿದ್ದಾಳೆಂದ ಮೇಲೆ ಅವಳ ವಿನಂತಿಯನ್ನು ಪರಿಗಣಿಸತೊಡಗಿದೆ.

''ಯಾಕವ್ವ, ನಾನು ಅಷ್ಟು ಲಗೂ ಎದ್ದು ಬಂದಿರತೇನಿ. ಅಂವಗೂ ಲಗೂ ಎದ್ದರ ಏನ್ ತ್ರಾಸ ಆಗ್ತದ?''

"ಅಲ್ಲೋ ಚಿನ್ನ, ಅವರು ಬಾಳಷ್ಟು ದಣಿದಿರತಾರು ಮತ್ತ್ ನಮ್ಮ ಸಲುವಾಗಿ ಚಿಂತಿ ಮಾಡತಿರತಾರು. ಯುದ್ಧದಾಗ ಅವರು ಬಾಳಷ್ಟು ದುಡಿದು ಬಂದಾರ. ಈಗಲಾದರೂ ಅವರಿಗೆ ನಾವು ವಿಶ್ರಾಂತಿ ಕೊಡಬೇಕೋ? ಬ್ಯಾಡೋ? ನೀನೆ ಹೇಳು."

